## ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 8/2025

ಎಂ.ಡಬ್ಲ್ಯೂ-2

**ದಿನಾಂಕ 24.03.2026 ರಂದು ಸಾಕ್ಷಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಪಿ ಪಿ ಬಿ ಆರ್ ವಕೀಲರಿಂದಃ**

ನಿಡಬ್ಲ್ಯೂ-11 ರ ದಾಖಲೆಯನ್ನು 1 ನೇ ಪಕ್ಷಗಾರರ ಭರ್ತಿ ಮಾಡಿ ಕೊಟ್ಟಿರುತ್ತಾರೆ. ಅದರಲ್ಲಿರುವ ದಿನಾಂಕವನ್ನು ನಾವು ನಮೂದು ಮಾಡಿರುತ್ತೇವೆ. ನಿಡಬ್ಲ್ಯೂ-11 ರ ದಾಖಲೆಯನ್ನು ನಮಗೆ ತೋಚಿದ ದಿನಾಂಕವನ್ನು ನಮೂದಿಸಿ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಬ್ಲ್ಯೂ-11 ರ ದಾಖಲೆಯನ್ನು ಸಂಪೂರ್ಣ ಪರಿಶೀಲನೆ ಮಾಡಿ, ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿ. Duty Roaster ದಾಖಲೆಯು ನವೆಂಬರ್ 2023 ರಿಂದ ಮೇ 2024 ರವರೆಗೆ ಇರುತ್ತದೆ ಎಂದರೆ ಸರಿ. ಸದರಿ Duty Roaster ದಾಖಲೆಯನ್ನು ನಮ್ಮ ಸಂಸ್ಥೆಯ ಗಾರ್ಡ್ ಗಳು ತಯಾರಿಸುತ್ತಾರೆ. ಸದರಿ ದಾಖಲೆಯನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರು verify ಮಾಡುವುದಿಲ್ಲ. ಸದರಿ ದಾಖಲೆಯು ಸಂಪೂರ್ಣ ನಮ್ಮ ಹತೋಟಿಯಲ್ಲಿ ಇರುತ್ತದೆ ಎಂದರೆ ಸರಿ. ಆದ್ದರಿಂದ ಅದರಲ್ಲಿ ಬದಲಾವಣೆಗಳನ್ನು ನಾವು ಮಾಡಬಹದಾಗಿರುತ್ತದೆ ಎಂದರೆ ಸರಿಯಲ್ಲ. Duty Roaster ದಾಖಲೆಯನ್ನು Excel Sheet ನಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ದಾಖಲೆಯನ್ನು ಸೃಷ್ಟಿ ಮಾಡಿ, ತಂದು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಪ್ರಾರಂಭಿಕ ಹಂತದಲ್ಲಿ ಏಕೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಕೊಡಬೇಕು ಎಂದು ತೋಚಿರಲಿಲ್ಲ ಎನ್ನುತ್ತಾರೆ.

1 ನೇ ಪಕ್ಷಗಾರರನ್ನು ಕೆಲಸಕ್ಕೆ ಬರಬೇಡಿ ಎಂದು ಹೇಳಿದರೂ ಕೂಡ Duty Roaster(Ex.M-12) ದಾಖಲೆಯಲ್ಲಿ LOP ಎಂದು ತೋರಿಸಿರುತ್ತೇವೆ ಎಂದರೆ ಸಾಕ್ಷಿಯು ನಾವು ಅವರನ್ನು ಕೆಲಸಕ್ಕೆ ಬರಬೇಡಿ ಎಂದು ಹೇಳಿಲ್ಲ ಎಂದು ಹೇಳುತ್ತಾರೆ. ನಿಡಬ್ಲ್ಯೂ-12 ಮತ್ತು ನಿಡಬ್ಲ್ಯೂ-13 ರ ದಾಖಲೆಯಲ್ಲಿ Already Terminated ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ಹೇಳಿದ ಮೇಲು ಸಹ ನಿಡಬ್ಲ್ಯೂ-12 ದಾಖಲೆಯನ್ನು ನ್ಯಾಯಾಲಯದ

ಮುಂದೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯು ಪ್ರತಿ ಶನಿವಾರ ನಮ್ಮ ಕಚೇರಿಗೆ ಬರುತ್ತದೆ ಎಂದರೆ ಸರಿ. ಸದರಿ ದಾಖಲೆ ನಮ್ಮ ಕಚೇರಿಯಲ್ಲಿ ರೆಡಿ ಇದ್ದರು ಕೂಡ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**